**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ.ನಂ : 101/2018**

ಚಾಸಾ ಃ 1 ಪ್ರಾ.ಸಾ ಃ 3
ಹೆಸರು : ಕಾಮಾಕ್ಷಿ
ಗಂಡನ ಹೆಸರು : ಸಂಗಯ್ಯ ಸ್ವಾಮಿ
ವಯಸ್ಸು : 31 ವರ್ಷ
ಉದ್ಯೋಗ : ಮನೆ ಕೆಲಸ
ವಾಸಸ್ಥಳ : ರಾಯಕೊಡ ಗ್ರಾಮ
ದಿನಾಂಕಃ : 06-02-2021 ಸತ್ಯಪ್ರತಿಜ್ಞೆ ಮೇರೆಗೆ

**ಮುಖ್ಯ ವಿಚಾರಣೆಃ- ಎ.ಪಿ.ಪಿ ಅವರಿಂದ ಃ-**

1ನೇ ಆರೋಪಿ ನನ್ನ ಗಂಡನಾಗಬೇಕು. 2ನೇ ಆರೋಪಿ ನನ್ನ ಅತ್ತೆ ಆಗಬೇಕು. 3ನೇ ಆರೋಪಿ ನನ್ನ ಗಂಡನ ಸೋಹದರ ಮಾವ, 4ನೇ ಆರೋಪಿ ನನ್ನ ಗಂಡನ ಸ್ನೇಹಿತನಾಗಿದ್ದಾನೆ. ನನ್ನ ಮದುವೆ 1ನೇ ಆರೋಪಿಯ ಜೊತೆಗೆ ನಮ್ಮ ಊರಿನ ಶಿವಲಿಂಗೇಶ್ವರ ಕಟ್ಟಿಮಠದಲ್ಲಿ ಆಗಿರುತ್ತದೆ. ನನ್ನ ಮದುವೆಯ ಸಮಯದಲ್ಲಿ ನನ್ನ ತಂದೆ ತಾಯಿಗಳು 1ನೇ ಆರೋಪಿಗೆ 2 ಲಕ್ಷ ಹಣ ಮತ್ತು 6 ತೊಲೆ ಬಂಗಾರ ಹಾಗೂ ಸುಮಾರು 1 ಲಕ್ಷ ಮೌಲ್ಯದ ಗೃಹಬಳಕೆಯ ವಸ್ತುಗಳನ್ನು ವರದಕ್ಷಿಣೆಯಾಗಿ ನೀಡಿದ್ದಾರೆ. ನಂತರ ನಾನು 1ನೇ ಆರೋಪಿಯ ಜೊತೆಗೆ ರುದನೂರು ಗ್ರಾಮದಲ್ಲಿ ಇದ್ದೇ. 1 ಮತ್ತು 2ನೇ ಆರೋಪಿತರು ನನ್ನನ್ನು ಸುಮಾರು 1 ತಿಂಗಳ ಕಾಲ ಚನ್ನಾಗಿ ನೋಡಿಕೊಂಡರು, ನಂತರ 1 ಮತ್ತು 2ನೇ ಆರೋಪಿತರು ನನ್ನ ಗಂಡ ಸರ್ಕಾರಿ ನೌಕರನಾಗಿದ್ದು, ಬೇರೆ ಹುಡುಗಿಯನ್ನು ಮದುವೆಯಾಗಿದ್ದರೆ ಹೆಚ್ಚಿಗೆ ವರದಕ್ಷಿಣೆ ಕೊಡುತ್ತಿದ್ದರು ಎಂದು ಜನ ಆಡಿಕೊಳ್ಳುತ್ತಿದ್ದಾರೆಂದು ಮದುವೆ ಮಾತುಕತೆಯಂತೆ ಉಳಿಕೆ 2 ತೊಲೆ ಬಂಗಾರ ಮತ್ತು 2 ಲಕ್ಷ ರೂಪಾಯಿ ಹಣ ತೆಗೆದುಕೊಂಡು ಬರುವಂತೆ ನನಗೆ ರಂಡಿ ಬೋಸಡಿ ಎಂದು ಅವಾಚ್ಯವಾಗಿ ಬೈದು, ಹೊಡೆದು ಮನೆ ಬಿಟ್ಟು ಹೋಗುವಂತೆ ಕಿರುಕುಳ ಕೊಡುತ್ತಿದ್ದರು. ನಾನು ಮದುವೆಯಾದ 2 ತಿಂಗಳಿಗೆ ಗರ್ಭವತಿಯಾಗಿದ್ದು, ಆ ಸಮಯದಲ್ಲಿ ಊಟ ಕೊಡದೇ ಹೊಡೆಬಡೆ ಮಾಡುತ್ತಿದ್ದರು, 1 ಮತ್ತು 2ನೇ ಆರೋಪಿತರು ಮನೆ ನಿರ್ಮಿಸಲು ಪ್ರಾರಂಭ ಮಾಡಿದ್ದು, ಆ ಸಮಯದಲ್ಲಿ ನನಗೆ ತವರು ಮನೆಯಿಂದ 2 ಲಕ್ಷ ಹಣ ತೆಗೆದುಕೊಂಡು ಬರುವಂತೆ ಹೊಡೆಯುತ್ತಿದ್ದರು, ನಂತರ ನನ್ನ ಅಣ್ಣನ ಮದುವೆಗೆ ಆಮಂತ್ರಣ ಪತ್ರ ಕೊಡಲು ಮನೆಗೆ ಬಂದಾಗ, ನಾವು ಕೇಳಿದ 2 ತೊಲೆ ಬಂಗಾರ ಕೊಟ್ಟರೆ ಮಾತ್ರ ನಿಮ್ಮ ಮಗಳನ್ನು ಮದುವೆಗೆ ಕಳುಹಿಸುತ್ತೇವೆ

ಮತ್ತು ನಾವು ಬರುತ್ತೇವೆಂದು ಹೇಳಿದ್ದಾರೆ. ನಂತರ ನಾನು ಮದುವೆಗೆ ಹೋಗಿದ್ದು, ಕೇಳಿದಷ್ಟು ಬಂಗಾರ ಹಣ ಕೊಟ್ಟರೆ ಮಾತ್ರ ಕರೆದುಕೊಂಡು ಹೋಗುವುದಾಗಿ ಹೇಳಿ ನನ್ನನ್ನು ನನ್ನ ತವರು ಮನೆಯಲ್ಲಿ ಬಿಟ್ಟಿದ್ದಾರೆ. ನಂತರ 8-10 ದಿನ ಕಳೆದ ನಂತರ ನನ್ನ ಅಣ್ಣ ಮದುವೆ ಸಲುವಾಗಿ ಸಾಲ ಆಗಿದೆ ಅದನ್ನು ತೀರಿಸಿದ ನಂತರ ಕೇಳಿದಷ್ಟು ಕೊಡುವುದಾಗಿ ಹೇಳಿದ್ದರಿಂದ ನನ್ನನ್ನು ಆರೋಪಿತರು ಮನೆಗೆ ಕರೆದುಕೊಂಡು ಹೋಗಿದ್ದಾರೆ.

ನಂತರ ದಿನಾಂಕಃ18-05-2017 ರಂದು ನನಗೆ ಹೊಡೆಬಡೆ ಮಾಡಿ ಮನೆಯಿಂದ ಹೊರಗೆ ಹಾಕಿದ್ದಾರೆ. ಆ ವಿಚಾರ ನನ್ನ ತಂದೆ ತಾಯಿಗೆ ಗೊತ್ತಾಗಿ ದಿನಾಂಕಃ25-05-2017 ರಂದು ಮನೆಗೆ ಬಂದು ನನ್ನ ಗಂಡನಿಗೆ ಯಾಕೆ ಹೊಡೆಬಡೆ ಮಾಡುತ್ತಿದ್ದೀರಿ ಎಂದು ಕೇಳಿದಾಗ, ಇನ್ನೂ ಮುಂದೆ ಚನ್ನಾಗಿ ನೋಡಿಕೊಳ್ಳುವುದಾಗಿ ಹೇಳಿದ್ದಾರೆ. ನಂತರ ಕೆಲವು ದಿನಗಳ ಕಾಲ ಚನ್ನಾಗಿ ನೋಡಿಕೊಂಡಿದ್ದು, ನಂತರ ದಿನಾಂಕಃ10-10-2017 ರಂದು ನನಗೆ ಹೊಡೆಬಡೆ ಮಾಡಿ, ಮನೆಯಿಂದ ಹೊರಗೆ ಹಾಕಿದ್ದು, ಆಗ 1ನೇ ಆರೋಪಿನ ಮಾವನಾದ ಮನೋಹರರವರು ಯಾಕೆ ಹೀಗೆ ಮಾಡುತ್ತಾರೆಂದು ಮನೆಗೆ ಕರೆದುಕೊಂಡು ಹೋಗಿ ಬಿಟ್ಟಿದ್ದಾರೆ. ದಿನಾಂಕಃ11-10-2017 ರಂದು ನಾನು ಬೆಳಿಗ್ಗೆ ಎದ್ದು ನೀರು ಕುಡಿಯಲು ಹೋದಾಗ, ನನ್ನ ಅತ್ತೆ ಹೊಡೆಬಡೆ ಮಾಡುತ್ತಿದ್ದರು, ಆಗ 1ನೇ ಆರೋಪಿ ದುಪ್ಪಟ ತೆಗೆದುಕೊಂಡು ನನ್ನ ಕುತ್ತಿಗೆಗೆ ಹಾಕಿ ಮಂಚದ ಮೇಲೆ ಎಳೆದಿದ್ದಾರೆ. ಆಗ ನಾನು ಪ್ರಜ್ಞೆ ತಪ್ಪಿ ಬಿದ್ದಿದ್ದೇನೆ. ನಮ್ಮ ಮನೆಯಲ್ಲಿ ಯಾವುದೇ ಗಲಾಟೆಯಾದರೂ ಅದಕ್ಕೆ 3 ಮತ್ತು 4 ರವರು ಕುಮ್ಮಕ್ಕು ಕೊಡುತ್ತಿದ್ದರು. 3 ಮತ್ತು 4ನೇ ಆರೋಪಿತರು 1ನೇ ಆರೋಪಿ ಸರ್ಕಾರಿ ನೌಕರನಾಗಿದ್ದಾನೆ ಆತನಿಗೆ ಯಾರು ಬೇಕಾದರು ಹೆಣ್ಣು ಕೊಡುತ್ತಾರೆಂದು ನನಗೆ ಬೈಯುತ್ತಿದ್ದರು. ದಿನಾಂಕಃ10-10-2017 ರಂದು 3ನೇ ಆರೋಪಿ ಕುಡಿದು ನಮ್ಮ ಮನೆಗೆ ಬಂದು ನನಗೆ ಅವಾಚ್ಯವಾಗಿ ಬೈದಿದ್ದಾನೆ. 4ನೇ ಆರೋಪಿನನಗೆ ನೀನಾಗಿ ಬಿಟ್ಟು ಹೋದರೆ ಸರಿ ಇಲ್ಲದಿದ್ದರೆ 1ನೇ ಆರೋಪಿಗೆ ಬೇರೆ ಮದುವೆ ಮಾಡುತ್ತೇನೆಂದು ಹೇಳುತ್ತಿದ್ದನು. ಗಲಾಟೆಯ ವಿಚಾರ ನಮ್ಮ ತಂದೆ ತಾಯಿಗೆ ಗೊತ್ತಾಗಿ ನಮ್ಮ ತಂದೆ ತಾಯಿ ಮತ್ತು ಚಾಸಾ-11, ಚಾಸಾ-8, ಚಾಸಾ-13, ಚಾಸಾ-19 ರವರು ಮನೆಗೆ ಬಂದು ಪ್ರಜ್ಞೆ ತಪ್ಪಿದ ನನಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ನನಗೆ ದಿನಾಂಕಃ12-10-2017 ರಂದು ಪ್ರಜ್ಞೆ ಬಂದಿದ್ದು, ನಂತರ ನಾನು ದೂರು ಸಲ್ಲಿಸಿದ್ದೇನೆ. ಸಾಕ್ಷಿ ತಾವು ನೀಡಿದ ಲಿಖಿತ ದೂರನ್ನು ನೋಡಿ ಗುರ್ತಿಸಿದ್ದು ಅದನ್ನು ನಿಶಾನೆ ಪಿ-3 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ-3(ಎ) ಎಂದು ಗುರ್ತಿಸಲಾಯಿತು. ದೂರು ಸಲ್ಲಿಸುವ ಸಮಯದಲ್ಲಿ ನಾನು 1 ತಿಂಗಳ ಗರ್ಭವತಿಯಾಗಿದ್ದೇ. 1ನೇ ಆರೋಪಿ ನನ್ನ ವಿರುದ್ದ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿದ್ದಾನೆ. ನಾನು ನನ್ನ

ಮತ್ತು ನನ್ನ ಮಗುವಿನ ಜೀವನಾಂಶಕ್ಕಾಗಿ ಅರ್ಜಿ ಸಲ್ಲಿಸಿದ್ದೇನೆ. 1ನೇ ಆರೋಪಿ ಈಗಾಗಲೇ ನಿಡುಗುಂದಾ ಗ್ರಾಮದ ರಾಜೇಶ್ವರಿ ತಂದೆ ಚಂದ್ರಶೇಖರ ಎಂಬುವಳನ್ನು 2ನೇ ಮದುವೆ ಮಾಡಿಕೊಂಡಿದ್ದಾನೆ.

(ಮಾನ್ಯ ಎಪಿಪಿ ಅವರು ಸದರಿ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ವಿನಂತಿಸಿದರು. ವಾದ ಆಲಿಸಲಾಯಿತು ದಾಖಲಾತಿಗಳನ್ನು ಪರಿಶೀಲಿಸಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೊಡಲಾಯಿತು)

**ಪಾಟೀ ಸವಾಲುಃ- ಎ.ಪಿ.ಪಿ. ಅವರಿಂದಃ-**

1 ಮತ್ತು 2ನೇ ಆರೋಪಿತರು ನನ್ನ ಹೊಟ್ಟೆಗೆ ಮತ್ತು ಮೈಕೈಗೆ ಬಲವಾಗಿ ಹೊಡೆದಿದ್ದರಿಂದ ಗರ್ಭಪಾತ ಆಗಿತ್ತು ಎಂದರೆ ಸರಿ. ದಿನಾಂಕಃ10-10-2017 ರಂದು ಸಂಜೆ 7-00 ಗಂಟೆ ಸುಮಾರಿಗೆ ನಾನು ಮನೆಯಲ್ಲಿ ಅಡುಗೆ ಮಾಡುತ್ತಿದ್ದಾಗ, 1ನೇ ಆರೋಪಿ ನನಗೆ ರಂಡಿ, ಬೋಸಡಿ ಎಂದು ಅವಾಚ್ಯವಾಗಿ ಬೈದಿದ್ದಾನೆಂದರೆ ಸರಿ. ಆರೋಪಿತರು ನನಗೆ ಮನೆ ಕಟ್ಟಲು 2 ಲಕ್ಷ ಹಣ ಮತ್ತು 5 ತೊಲೆ ಬಂಗಾರ ತೆಗೆದುಕೊಂಡು ಬರುವಂತೆ ಕಿರುಕುಳ ಕೊಡುತ್ತಿದ್ದರು ಎಂದರೆ ಸರಿ. ದಿನಾಂಕಃ11-10-2017 ರಂದು ನನಗೆ 1 ಮತ್ತು 2ನೇ ಆರೋಪಿತರು ಮೈಕೈಗೆ ಮತ್ತು ಹೊಟ್ಟೆಗೆ ಹೊಡೆದು ಕಾಲಿನಿಂದ ಬೆನ್ನಿಗೆ ಒದಿದ್ದಾರೆಂದರೆ ಸರಿ. ದಿನಾಂಕಃ11-10-2017 ರಂದು ಬೆಳಗ್ಗೆ 10-00 ಗಂಟೆ ಸುಮಾರಿಗೆ ನನಗೆ ಓಡಣಿಯಿಂದ ನೇಣು ಹಾಕಿ ಹೋಗಿದ್ದಾರೆಂದರೆ ಸರಿ. ಸದರಿ ವಿಚಾರಗಳನ್ನು ನನ್ನ ದೂರಿನಲ್ಲಿ ತಿಳಿಸಿದ್ದೇನೆಂದರೆ ಸರಿ. ನಂತರ ಪೊಲೀಸರಿಗೆ ನಾನು ಓಡಣಿಯನ್ನು ಕೊಟ್ಟಿದ್ದೇನೆಂದರೆ ಸರಿ. ಆ ಸಮಯದಲ್ಲಿ ಚಾಸಾ-19 ಮತ್ತು 20 ರವರು ಇದ್ದರು ಎಂದರೆ ಸರಿ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಿ ಕೇಳಲಾಗಿ ಅದರಲ್ಲಿ ತಾವು ಇರುವುದಾಗಿ ನೋಡಿ ಗುರ್ತಿಸಿದ್ದರ ಆಧಾರದ ಮೇರೆಗೆ ಸದರಿ ಫೋಟೋವನ್ನು ನಿಶಾನೆ ಪಿ-4 ಎಂದು ಗುರ್ತಿಸಲಾಯಿತು.

**ಮುದ್ದೆಮಾಲನ್ನು ಗುರ್ತಿಸುವ ಸಲುವಾಗಿ ಮುಂದೂಡಲಾಯಿತು.**

(ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೆ. ಸರಿ ಇದೆ

ಪ್ರ.ದ.ನ್ಯಾ.ದಂ. ಚಿಂಚೋಳಿ